ಈ ಮಧ್ಯಂತರ ಅರ್ಜಿ **12** ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **14** ನಿಯಮ **1** ರಡಿ ಅರ್ಜಿದಾರರು/ಅಲ್ಪವಹಿ ಪ್ರತಿವಾದಿ **2** ಮತ್ತು **3** ರವರ ನ್ಯಾಯಾಲಯದ ಸಂರಕ್ಷಣೆದಾರ ಈ ಅರ್ಜಿಯಲ್ಲಿ ಹೇಳಿರುವ **02** ವಿವಾದಾಂಶಗಳನ್ನು ಹೆಚ್ಚುವರಿಯಾಗಿ ರಚನೆ ಮಾಡಬೇಕೆಂದು ಕೋರಿರುತ್ತಾರೆ.

ವಾದಿ ವಕೀಲರು ಮಧ್ಯಂತರ ಅರ್ಜಿ **12** ಕ್ಕೆ ತಕರಾರು ಸಲ್ಲಿಸಿರುತ್ತಾರೆ.

ಎರಡೂ ಪಕ್ಷಕಾರರ ವಕೀಲರ ವಾದ ಆಲಿಸಿರುತ್ತದೆ.

ಅರ್ಜಿಯ ಸಂಗತಿಗಳು, ತಕರಾರಿನ ಸಂಗತಿಗಳು ಮತ್ತು ಎರಡೂ ಪಕ್ಷಕಾರರ ವಕೀಲರ ವಾದ ಆಲಿಸಿದ ನಂತರ ಈ ಕೆಳಗೆ ಹೇಳಿದ ಅಂಶಗಳು ನನ್ನ ಗಣನೆಗೆ ಬಂದಿರುತ್ತದೆ.

1. ಅಲ್ಪವಹಿ ಪ್ರತಿವಾದಿ **2** ಮತ್ತು **3** ರವರ ನ್ಯಾಯಾಲಯದ ಸಂರಕ್ಷಣೆದಾರ ಕೋರುತ್ತಿರುವಂತೆ ಹೆಚ್ಚುವರಿ ವಿವಾದಾಂಶಗಳನ್ನು ರಚನೆ ಮಾಡುವುದು ಈ ದಾವೆಯಲ್ಲಿನ ಪಕ್ಷಕಾರರ ನಡುವೆ ವ್ಯಾಜ್ಯದ ಸಂಗತಿಗಳನ್ನು ನಿರ್ಣಯ ಮಾಡಲು ಅವಶ್ಯಕ ಆಗಿರುತ್ತದೆಯೇ ?
2. ಏನು ಆದೇಶ ?

ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ.

1. ಅಂಶ 1ಃ ಸಕಾರಾತ್ಮಕ
2. ಅಂಶ 2ಃ ಅಂತಿಮ ಆದೇಶದಂತೆ. ಈ ಕೆಳಗೆ ಹೇಳಿದ ಕಾರಣಗಳಿಗಾಗಿ

## ಕಾರಣಗಳು

ಅಂಶ 1ಃ ಅಲ್ಪವಹಿ ಪ್ರತಿವಾದಿ 2 ಮತ್ತು 3 ರವರ ನ್ಯಾಯಾಲಯದ ಸಂರಕ್ಷಣೆದಾರ ಪ್ರತಿವಾದ ಪತ್ರದ ವಾಕ್ಯವೃಂದ 5 ರಿಂದ 10 ರಲ್ಲಿ ಹೇಳಿರುವ ಸಂಗತಿಗಳ ಆಧಾರದ ಮೇಲೆ ವಿವಾದಾಂಶಗಳನ್ನು ರಚನೆ ಮಾಡುವುದುಈ ದಾವೆಯಲ್ಲಿನ ಪಕ್ಷಕಾರರ ನಡುವೆ ವ್ಯಾಜ್ಯದ ಸಂಗತಿಗಳನ್ನು ನಿರ್ಣಯ ಮಾಡಲು ಅವಶ್ಯಕ ಆಗಿರುತ್ತದೆ ಎಂದು ತಮ್ಮ ವಾದದಲ್ಲಿ ಹೇಳಿರುತ್ತಾರೆ.

ವಾದಿ ವಕೀಲರು ತಕರಾರಿನಲ್ಲಿ ನಿಖರವಾಗಿ ಮಧ್ಯಂತರ ಅರ್ಜಿಗೆ ತಮ್ಮ ತಕರಾರು ಏನು ಎಂದು ಹೇಳಿರುವುದಿಲ್ಲ.

ಅಲ್ಪವಹಿ ಪ್ರತಿವಾದಿ 2 ಮತ್ತು 3 ರವರ ನ್ಯಾಯಾಲಯದ ಸಂರಕ್ಷಣೆದಾರ ಸಲ್ಲಿಸಿರುವ ಪ್ರತಿವಾದ ಪತ್ರದ ವಾಕ್ಯವೃಂದ 5 ರಿಂದ 10 ರಲ್ಲಿ ಹೇಳಿರುವ ಸಂಗತಿಗಳನ್ನು ಗಮನಿಸಿದಾಗ ಹೆಚ್ಚುವರಿಯಾಗಿ ರಚನೆ ಮಾಡಲು ಕೋರುತ್ತಿರುವ ವಿವಾದಾಂಶಗಳ ಜೊತೆಗೆ ಹೆಚ್ಚುವರಿಯಾಗಿ ಇನ್ನೂ 03 ವಿವಾದಾಂಶಗಳನ್ನು ರಚನೆ ಮಾಡುವುದು ಈ ದಾವೆಯಲ್ಲಿನ ಪಕ್ಷಕಾರರ ನಡುವೆ ಇರುವ ವ್ಯಾಜ್ಯದ ಸಂಗತಿಗಳನ್ನು ನಿರ್ಣಯ ಮಾಡಲು ಅವಶ್ಯಕ ಆಗಿರುತ್ತದೆ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದು ಆದ್ದರಿಂದ ಅಂಶ 1 ನ್ನು ಸಕಾರಾತ್ಮಕ ಎಂದು ಉತ್ತರಿಸಿರುತ್ತದೆ.

ಅಂಶ 2ಃ ಅಂಶ 1 ಕ್ಕೆ ಬಂದಿರುವ ನಿರ್ಣಯಕ್ಕೆ ಅನುಸಾರ ಈ ಕೆಳಗಿನಂತೆ

<u>ಆದೇಶ</u>

**ಮಧ್ಯಂತರ ಅರ್ಜಿ 12, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 14 ನಿಯಮ 1ರಡಿ ಅರ್ಜಿದಾರರು/ಅಲ್ಪವಹಿ ಪ್ರತಿವಾದಿ 2 ಮತ್ತು 3ರವರ ನ್ಯಾಯಾಲಯದ ಸಂರಕ್ಷಣೆದಾರ ಸಲ್ಲಿಸಿರುವುದನ್ನು ಪುರಸ್ಕರಿಸಿರುತ್ತದೆ.**

**ಹೆಚ್ಚುವರಿ ವಿವಾದಾಂಶಗಳ ರಚನೆಗಾಗಿ,**

**ಕರೆಯುವ ದಿನಾಂಕಃ 18.07.2018.**

(ಜಿ. ರಾಘವೇಂದ್ರ)
ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,
ಸಾಗರ .